ಕಾಣಬಹುದು. ಶೃಂಗಾರ ರಸವನ್ನು ಪ್ರಚೋದಿಸುವ ಖಜುರಾಹೊವಿನ ಶಿಲ್ಪ ಕಲಾಕೃತಿಗಳು, ಗಾಂಭೀರ್ಯತೆಯನ್ನು ಹೊತ್ತು ನಿಂತ ಗ್ವಾಲಿಯರ್ ಕೋಟೆ, ದೇಗುಲಗಳ ಪವಿತ್ರ ನಗರ ಉಜ್ಜಯಿನಿ ಮತ್ತು ಚಿತ್ರಕೂಟ, ಓರಛಾದ ಸ್ಮಾರಕಗಳು, ಹೀಗೆ ವಿಸ್ಮಯಭರಿತ ಹಲವು ಕಲಾಕೃತಿಗಳನ್ನು ಇಲ್ಲಿನ ವಿವಿಧ ವಾಸ್ತುಶಿಲ್ಪದ ಉದಾಹರಣೆಯಾಗಿ ಕಾಣಬಹುದು. ಇಲ್ಲಿರುವ ಅಭಯಾರಣ್ಯ ಹಾಗು ರಾಷ್ಟ್ರೀಯ ಉದ್ಯಾನಗಳು ಮಧ್ಯ ಪ್ರದೇಶ ಪ್ರವಾಸೋದ್ಯಮದ ಪ್ರಮುಖ ಅಂಗಗಳು. ಹಚ್ಚ ಹಸಿರಿನ ಕಾಡುಗಳು ವಿವಿಧ ಬಗೆಯ ಪ್ರಾಣಿ ಪಕ್ಷಿಗಳಿಗೆ ಆವಾಸ ಸ್ಥಾನವಾಗಿದೆ.

### ಶಾಂತ ಪರಿಸರದ ಹನುವಾಂಟಿಯ

ಖಂಡವಾ ಜಿಲ್ಲೆಯಲ್ಲಿ ಹರಿಯುವ ನರ್ಮದಾ ನದಿಗೆ ಅಡ್ಡಲಾಗಿ ಕಟ್ಟಿರುವ ಬೃಹತ್ ಆಣೆಕಟ್ಟು ಮತ್ತೊಂದು ಆಕರ್ಷಣೆ. 'ಇಂದಿರಾ ಸಾಗರ ಆಣೆಕಟ್ಟು' ಎಂದು ಇದನ್ನು ಗುರುತಿಸುತ್ತಾರೆ. ಈ ನದಿಯ ಹಿನ್ನೀರಿನಲ್ಲಿ ಒಂದು ಸರೋವರವೇ ನಿರ್ಮಾಣಗೊಂಡಿದ್ದು, ಈ ಸರೋವರ ಪಕ್ಕದಲ್ಲಿ ಒಂದು ಸುಂದರವಾದ ದ್ವೀಪವನ್ನು ನಿರ್ಮಿಸಲಾಗಿದೆ, ಅದುವೇ 'ಹನುವಾಂಟಿಯ ದ್ವೀಪ'. ಪ್ರಶಾಂತ ವಾತಾವರಣ ಪ್ರಿಯರಿಗಿದು ಉತ್ತಮ ವಿರಾಮ ತಾಣ.

ಸಾಹಸ ಚಟುವಟಿಕೆಗಳ ತಾಣವಾಗಿಯೂ ಗುರ್ತಿಸಿಕೊಂಡಿರುವ ಹನುವಾಂಟಿಯ ದ್ವೀಪವು ರಜಾದಿನಗಳನ್ನು ಕಳೆಯಲು ಸೂಕ್ತವಾಗಿದೆ. ಮಧ್ಯಪ್ರದೇಶ ಸರ್ಕಾರ ಕಳೆದ ಎರಡು ಮೂರು ವರ್ಷಗಳಿಂದ ಈ ದ್ವೀಪದಲ್ಲಿ ಪ್ರತಿವರ್ಷ ಡಿಸೆಂಬರ್‌ನಿಂದ ಜನವರಿ ತಿಂಗಳವರೆಗೆ ಸಂಪೂರ್ಣವಾಗಿ ಒಂದು ತಿಂಗಳ ಕಾಲ 'ಜಲ್ ಮಹೋತ್ಸವ' ಎಂಬ ಉತ್ಸವವನ್ನು ಏರ್ಪಡಿಸುತ್ತಿದ್ದು, ಆ ಸಮಯದಲ್ಲಿ ಈ ದ್ವೀಪವು ಜನಜಂಗುಳಿಯಿಂದ ತುಂಬಿಕೊಂಡು, ಎಲ್ಲಿ ನೋಡಿದರೂ ಗಾಳಿಪಟಗಳ ಹಾರಾಟ ಕಣ್ಣಿಗೆ ಬೀಳುತ್ತದೆ.

ಹನುವಾಂಟಿಯಾ ದ್ವೀಪದಲ್ಲಿ ನೀರಿನ ಸಾಹಸ ಚಟುವಟಿಕೆಯನ್ನು ಇಷ್ಟಪಡುವವರಿಗೆ ಸ್ಕೂಬಾ ಡೈವಿಂಗ್ ಉತ್ತಮ ಚಟುವಟಿಕೆಯಾಗಿದೆ. ದ್ವೀಪದ ಸಮೀಪವಿರುವ ನೀರಿನಲ್ಲಿ ಸ್ಕೂಬಾ ಡೈವಿಂಗ್ ಸಹೃದಯರನ್ನು ಮೋಡಿಮಾಡುತ್ತದೆ. ವರ್ಣರಂಜಿತ ಮತ್ತು ವಿವಿಧ ಬಗೆಯ ಮೀನುಗಳನ್ನೂ ಇಲ್ಲಿ ಕಾಣಬಹುದಾಗಿದೆ. ಜೆಟ್ ಸ್ಕೀ ಇಲ್ಲಿನ ಮತ್ತೊಂದು ಆಕರ್ಷಣೆ. ನೀರಿನಲ್ಲಿನ ಮೋಜು, ಸಾಹಸ ಚಟುವಟಿಕೆಗಳು ಸಾಕೆನ್ನಿಸಿದರೆ ಹಾಟ್ ಏರ್ ಬಲೂನ್ ರೈಡ್‌ನ್ನು ಆಯ್ಕೆ ಮಾಡಿಕೊಳ್ಳಬಹುದು. ಗಾಳಿಯಲ್ಲಿ ಮೇಲಕ್ಕೆ ಹಾರುತ್ತಾ ಇಡೀ ಸ್ಥಳದ ಪಕ್ಷಿನೋಟವನ್ನು ಅನುಭವಿಸಬಹುದು. ಎಲ್ಲ ಸೌಲಭ್ಯಗಳನ್ನು ಹೊಂದಿರುವ ಈ ದ್ವೀಪದಲ್ಲಿ ಪ್ರವಾಸಿಗರಿಗೆ ತಂಗಲು ಸಾಕಷ್ಟು ಟೆಂಟ್ ಹೌಸ್‌ಗಳನ್ನು ನಿರ್ಮಿಸಲಾಗಿದೆ. ತಿಂಡಿ ತಿನಿಸುಗಳಿಗೋಸ್ಕರ ಸಾಕಷ್ಟು ಹೋಟೇಲ್‌ಗಳು ಕೂಡ ಇವೆ.

### ವನ್ಯಜೀವಿಗಳ ಆಗರ

ಹನುವಾಂಟಿಯ ದ್ವೀಪವು ಬರೀ ನೀರಿನ ಚಟುವಟಿಕೆಗಳಿಗೆ ಮಾತ್ರವಲ್ಲ, ಇಲ್ಲಿ ವನ್ಯಜೀವಿಗಳನ್ನೂ ಕಾಣಬಹುದಾಗಿದೆ. ಈ ದ್ವೀಪವು ಎತ್ತರವಾದ ಮರಗಿಡಗಳನ್ನು ಹೊಂದಿದ್ದು ವನ್ಯಜೀವಿಗಳ ವಾಸಕ್ಕೆ ಅನುಕೂಲಕರವಾಗಿದೆ. ಅನೇಕ ವಲಸೆ ಹಕ್ಕಿಗಳು ಈ ಪ್ರದೇಶವನ್ನು ಅರಸಿ ಬರುತ್ತವೆ. ಜಿಂಕೆಗಳಂತಹ ಪ್ರಾಣಿಗಳು ಓಡಾಡುವುದನ್ನು ನಾವಿಲ್ಲಿ ಕಾಣಬಹುದಾಗಿದೆ. ಇಲ್ಲಿನ ಹವಾಮಾನವು ಆಹ್ಲಾದಕರ.

### ತಲುಪುವ ಮಾರ್ಗ:

ದೇಶದ ಪ್ರಮುಖ ನಗರಗಳಿಂದ ಹನುವಾಂಟಿಯ ದ್ವೀಪವನ್ನು ತಲುಪಬಹುದು. ಇಂದೋರ್‌ನಿಂದ 150 ಕಿ.ಮೀ ಅಂತರದಲ್ಲಿರುವ ದ್ವೀಪಕ್ಕೆ ರಸ್ತೆ ಮಾರ್ಗದ ಮೂಲಕ ಸುಲಭವಾಗಿ ಬರಬಹುದು. ಇಂದೋರ್ ಪಟ್ಟಣದಲ್ಲಿಯೇ ವಿಮಾನ ನಿಲ್ದಾಣವಿದ್ದು, ಭಾರತದ ಪ್ರಮುಖ ನಗರಗಳೊಂದಿಗೆ ಉತ್ತಮ ಸಂಪರ್ಕ ಹೊಂದಿದೆ. ರೈಲಿನ ಮೂಲಕ ಬರುವವರಿಗೆ ಹತ್ತಿರದ ರೈಲ್ವೆ ನಿಲ್ದಾಣ ಖಾಂಡ್ವಾದಲ್ಲಿದೆ. ಇದು ಹನುವಾಂಟಿಯದಿಂದ ಕೇವಲ 50 ಕಿ.ಮೀ ದೂರದಲ್ಲಿದೆ. ರೈಲು ನಿಲ್ದಾಣದಿಂದ ಬಾಡಿಗೆ ಕಾರುಗಳು ದೊರೆಯುತ್ತವೆ.

